ಇ ಜೀ ವ ನ

# ‘ವಸುಧೈವ ಕುಟುಂಬಕಂ’

ಭಾರತದ ಧ್ಯೇಯ ವಾಕ್ಯವಾದ “ವಸುಧೈವ ಕುಟುಂಬಕಂ” ಇಂದು ಹೊಸ ಅರ್ಥವನ್ನು ಪಡೆದಿದೆ. ತನ್ನ ಧರ್ಮ, ಸಂಸ್ಕೃತಿ, ಆಧ್ಯಾತ್ಮಗಳಿಂದ ವಿಶ್ವಕ್ಕೇ ದಾರಿದೀಪವಾಗಿದ್ದ ಭಾರತವು ಇಂದು ಐಟಿ ಸಾಮರ್ಥ್ಯದ ಆಧಾರದ ಮೇಲೆ ಈ ಘೋಷಣೆಯನ್ನು ಮತ್ತೊಮ್ಮೆ ಮಾಡುತ್ತಿದೆ. ಇತ್ತೀಚೆಗಷ್ಟೇ ಮುಕ್ತಾಯಗೊಂಡ ‘ನ್ಯಾಸ್‌ಕಾಮ್ 2003’ ಐಟಿ ಸಮಾವೇಶದ ಮೂಲಮಂತ್ರವೂ ಇದೇ ಆಗಿತ್ತು. ಅನೇಕ ಹೊಸ ಐಟಿ ಕ್ಷೇತ್ರಗಳಲ್ಲಿ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿರುವ ಭಾರತ, ಇಡೀ ವಿಶ್ವವೇ ತನ್ನ ಕುಟುಂಬ ಎಂದು ಕರೆದು ಎಲ್ಲರನ್ನೂ ತನ್ನತ್ತ ಆಕರ್ಷಿಸುತ್ತಿದೆ.

ಇಡೀ ವಿಶ್ವವು ಇಂದು ದುರ್ಬಲ ವ್ಯಾಪಾರ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾಗ್ಯೂ ಭಾರತದ ಐಟಿ ಸಾಧನೆ ಅವ್ಯಾಹತವಾಗಿ ಮುಂದುವರಿದಿದೆ. ಇದಕ್ಕೆ ಮುಖ್ಯ ಕಾರಣ ಬಹುಬೇಗನೆ ಭಾರತವು ಹೊಸ ವ್ಯಾಪಾರಯೋಗ್ಯ ಕ್ಷೇತ್ರಗಳತ್ತ ಗಮನಹರಿಸಿದ್ದು. ಐ.ಟಿ.ಇ.ಎಸ್. ಮತ್ತು ಬಿ.ಪಿ.ಓ., ಕ್ಷೇತ್ರಗಳು ಇಂದು ಭಾರತದ ಮಟ್ಟಿಗೆ ಅಪಾರವಾದ ಅವಕಾಶಗಳನ್ನು ತೆರೆದಿಟ್ಟಿವೆ. ಐಟಿಇಎಸ್ ಅಲೆಯನ್ನು ಏರಿ ಹೊರಟಿರುವ ಭಾರತ ಏಪ್ರಿಲ್-ಡಿಸೆಂಬರ್ 2002ರ ಅವಧಿಯಲ್ಲಿ ರೂ. 34,000 ಕೋಟಿ (6.9 ಬಿಲಿಯ ಡಾಲರ್) ವ್ಯಾಪಾರ ವಹಿವಾಟು ನಡೆಸಿತು. ಇದು 2001ರ ಇದೇ ಅವಧಿಯ ಸಾಧನೆಗಿಂತ ಶೇ.28ರಷ್ಟು ಹೆಚ್ಚು. (ಏಪ್ರಿಲ್-ಡಿಸೆಂಬರ್ 2001ರ ಅವಧಿಯಲ್ಲಿ ಇದು ರೂ. 26,600 ಕೋಟಿ ಅಥವಾ 5.6 ಬಿಲಿಯ ಡಾಲರ್ ಇತ್ತು). 2003ರ ಹೊತ್ತಿಗೆ ಈ ಬೆಳವಣಿಗೆ ಶೇ.60ರಷ್ಟು ಹೆಚ್ಚಾಗುವ ನಿರೀಕ್ಷೆಯಿದೆ.

ನ್ಯಾಸ್‌ಕಾಮ್ ಸಮೀಕ್ಷೆಯ ಪ್ರಕಾರ 2008ರ ಹೊತ್ತಿಗೆ ಜಾಗತಿಕ ಮಾರುಕಟ್ಟೆಯಲ್ಲಿರುವ ಹೊರಮೂಲ (Outsourcing) ಉತ್ಪನ್ನಗಳಲ್ಲಿ ಸುಮಾರು 100 ಬಿಲಿಯ ಡಾಲರ್‌ನ ಬಹುತೇಕ ಪಾಲನ್ನು ಭಾರತವು ತನ್ನದಾಗಿಸಿಕೊಳ್ಳಲಿದೆ. ಹಾಗೆಯೇ ಭಾರತದಲ್ಲೇ ತಯಾರಾಗುವ ಸಾಫ್ಟ್‌ವೇರ್ ರಫ್ತು ರೂ. 16,500 ಕೋಟಿಯಿಂದ (2001-02ರ ಮೊತ್ತ) ರೂ. 18,500 ಕೋಟಿಗೆ ಬೆಳೆಯುವ ನಿರೀಕ್ಷೆಯಿದೆ. ವಿದೇಶೀ ನೆಲದಲ್ಲಿ ನಮ್ಮ ಇಂಜಿನಿಯರುಗಳಿಂದ ತಯಾರಾಗುವ ಸಾಫ್ಟ್‌ವೇರ್ ರಫ್ತು 18,500 ಕೋಟಿ ರೂ.ಗಳಿಂದ 27,500 ಕೋಟಿ ರೂ.ಗಳಿಗೆ (2002-03ರಲ್ಲಿ) ಬೆಳೆಯುವ ನಿರೀಕ್ಷೆಯಿದೆ.

ನಮ್ಮ ಐಟಿ ಸೇವೆಗಳನ್ನು ಅಮೆರಿಕ, ಯೂರೋಪ್ ಮತ್ತು ಜಪಾನ್ ದೇಶಗಳು ಇದೀಗ ಪಡೆಯುತ್ತಿವೆ. ಇನ್ನು ಮುಂದೆ ಮೆಕ್ಸಿಕೋ, ದಕ್ಷಿಣ ಅಮೇರಿಕ, ಮೊರೊಕ್ಕೋ, ಪೂರ್ವ ಯೂರೋಪ್ (ಹಂಗೇರಿ), ದಕ್ಷಿಣ ಆಫ್ರಿಕಾ ಮತ್ತು ಫಿಲಿಪ್ಪೈನ್ಸ್ ದೇಶಗಳಿಗೂ ನಮ್ಮ ಸೇವೆಗಳು ಮುಟ್ಟುವ ನಿರೀಕ್ಷೆಯಿದೆ.

“ನ್ಯಾಸ್‌ಕಾಮ್ 2003”ರಲ್ಲಿ ಮೂಡಿಬಂದ ಇನ್ನೊಂದು ಸಂಗತಿಯೆಂದರೆ ವಿಶ್ವದ 30 ಅತಿ ದೊಡ್ಡ ಐಟಿ ತಯಾರಕರ ಪೈಕಿ ಶೇ. 70ರಷ್ಟು ತಯಾರಕರು ಈಗಾಗಲೇ ಭಾರತದಲ್ಲಿ ಬಿಪಿಓ ಕೇಂದ್ರಗಳನ್ನು ತೆರೆದಿದ್ದಾರೆ ಅಥವಾ ತೆರೆಯುವ ಹಂತದಲ್ಲಿದ್ದಾರೆ. ಈ ಬೆಳವಣಿಗೆಗಳಿಂದ 2008ರ ಹೊತ್ತಿಗೆ ಐಟಿಇಎಸ್/ಬಿಪಿಓ ಕ್ಷೇತ್ರವು ಭಾರತದ GDP ಬೆಳವಣಿಗೆಯ ಶೇ.7ರಷ್ಟು ಭಾಗವನ್ನು ಪೂರೈಸುವ ನಿರೀಕ್ಷೆಯಿದೆ. ಇದು ಭಾರತದ GDPಗೆ ಅತಿ ಹೆಚ್ಚು ಶೇಕಡ ಬೆಳವಣಿಗೆಯನ್ನು ದೊರಕಿಸಿಕೊಡುವ ಕೃಷಿ ಕ್ಷೇತ್ರಕ್ಕಿಂತ ಕೆಲವೇ ಅಂಕಗಳಷ್ಟು ಕಡಿಮೆ.

BPO/ ITES ಕೇವಲ ಕೆಳಮಟ್ಟದ ಸಹಾಯಕ ಸೇವಾ ಕ್ಷೇತ್ರಗಳಿಗೆ ಮಾತ್ರ ಮೀಸಲು ಎಂಬ ತಪ್ಪು ಭಾವನೆ ಈಗೀಗ ಬದಲಾಗುತ್ತಿದೆ. ಏಕೆಂದರೆ, ಸಂಶೋಧನೆ, ತಾಂತ್ರಿಕ ವಿನ್ಯಾಸ, ಆರೋಗ್ಯ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಕ್ಷೇತ್ರಗಳಿಗೂ ಐಟಿಇಎಸ್ ಸೇವೆಗಳು ವಿಸ್ತರಿಸಿವೆ.

ಇಂಥ ಅಗಾಧವಾದ ಶಕ್ತಿಯುಳ್ಳ ಐಟಿ ಕ್ಷೇತ್ರದ ಮೂಲಕ ಭಾರತವು ಇಡೀ ವಿಶ್ವವೇ ತನ್ನ ಕುಟುಂಬ ಎಂದು ಸಾರುವ ‘ವಸುಧೈವ ಕುಟುಂಬಕಂ’ ಎಂಬ ಧ್ಯೇಯ ವಾಕ್ಯವನ್ನು ಮತ್ತೊಮ್ಮೆ ನಮ್ಮೆಲ್ಲರಿಗೂ ನೆನಪಿಸುತ್ತಿರುವುದು ಸಮಂಜಸವಲ್ಲವೇ?

ಜಿ.ಪಿ. ವಿನಯಬಾಬು